ಪಬ್ಲಿಕ್ ಪರೀಕ್ಷೆಯಲ್ಲಿ ಮೊದಲ ಡೆಸ್ಕ್‌ನಲ್ಲೇ ನಾನು. ಕಡೇ ಬೆಂಚಿನ ಕಡೇ ಸಾಲಿನ ಮೂಲೆಯಲ್ಲಿ ಪಾರು ಹೆಸರು! ಖಾಲಿಯೇ ಉಳಿದುಹೋದ ಅವಳು ಕೂರಬೇಕಾಗಿದ್ದ ಜಾಗ! ಅವಳು ಕೂರಬೇಕಿದ್ದ ಡೆಸ್ಕಿನ ಮೂಲೆಯ ಆ ಖಾಲಿ ಜಾಗ ಅಂದು ಅಂತರಂಗದೊಳಗೆ ಆವರಿಸಿಕೊಂಡಿದ್ದು ಸುಜಿ ಹೊಸ್ತಿಲು ದಾಟಿ ಮನೆ ಮನ ಬೆಳಗಿದ ಮೇಲೂ ಎದೆಯಾಳದ ಒಂದು ಮೂಲೆಯೊಳಗೆ ಹಾಗೆಯೇ ಉಳಿದುಹೋಗಿತ್ತು. ಯಾರೋ ನನ್ನ ಹೃದಯದೊಳಗೇ ನೇರ ಕೈ ಹಾಕಿ ಹುಣಿಸೇಹಣ್ಣು ಕಿವಿಚಿದಂತೆ ನನ್ನನ್ನೇ ಹಿಂಡಿ ಹಿಪ್ಪೆ ಮಾಡಿದಂತೆ, ಇದ್ದಕಿದ್ದಂತೆ ಹೊಟ್ಟೆ ಮುರುಟಿ ಸಂಕಟವಾಗಿ ಒಮ್ಮೆಲೇ ಎಲ್ಲವೂ ಉಮ್ಮಳಿಸಿ ಬಂದಂತೆ, ಕಾಲೇಜಿನ ಮತ್ತೊಂದು ತುದಿಯಲ್ಲಿರುವ ಟಾಯ್ಲೆಟ್‌ಗೆ ಎಕ್ಸಾಮ್ ನಂತರ ಓಡಿ ಹೋಗುತ್ತಿದ್ದೆ. ಅಸಾಧ್ಯ ವಾಸನೆಯೊಳಗೆ ಅಸಹಾಯಕನಾಗಿ ಬೆಳಕಿಂಡಿಯಲ್ಲಿ ಕಂಡ ತುಂಡು ಆಕಾಶವನ್ನೇ ಹತಾಶೆಯಿಂದ ನಿಟ್ಟಿಸುತ್ತಾ ನಿಂತಂತಹ ಆ ಕ್ಷಣಗಳು ನನಗೆ ನೆನಪಿಲ್ಲವೇ? ಆದರೆ ಅದು ಪ್ರೀತಿಯಿರಬಹುದೆನ್ನುವುದು ನನಗೂ ಖಂಡಿತಾ ಗೊತ್ತಿರಲಿಲ್ಲ.

ಬಹುಶಃ ಅವೆಲ್ಲಾ ಅರ್ಥವಾಗಿದ್ದು ಆನಂತರವಿರಬೇಕು. ಪಾರು ನಿಜಕ್ಕೂ ಮಾಯವಾಗಿ ಕ್ರಮೇಣ ಕಳೆದುಕೊಂಡಿದ್ದರ ಅರಿವು ನನ್ನೊಳಗಿಳಿದು ಸ್ಪಷ್ಟವಾದ ಮೇಲೆ. ಹಾಗಂತಾ ಎಷ್ಟೋ ವರುಷಗಳ ನಂತರ ಹೀಗೆ ಎದುರಿಗೆ ಕೂತು ಮುಖಾಮುಖಿಯಾಗಿ ಬಾಲ್ಯದ ಯಾವುದೋ ನೆನಪುಗಳಿಗೆ ಅರ್ಥ ಹುಡುಕುವುದು ಕೂಡಾ ಸದ್ಯದ ನನ್ನ ಬದುಕಿನ ಆಸಕ್ತಿಯ ವಿಷಯದಂತೆ ನನಗೇ ಅನ್ನಿಸುತ್ತಿಲ್ಲ. ವಾಸ್ತವದಲ್ಲಿ ನಿಜಕ್ಕೂ ನನ್ನೆದುರು ಅವಳು ಬಂದು ನಿಂತಾಗಲೂ ಯಾಕೆ ನನ್ನಲ್ಲಿ ಮಾತೇ ಹುಟ್ಟುತ್ತಿಲ್ಲ? ಈಗ, ಹೀಗೆ ಎದುರುಬದುರು ಕೂತಾಗಲೂ ಎಂದಿನದ್ದೋ ತಿಳಿದುಕೊಳ್ಳಬೇಕೆನ್ನುವ ಹಪಾಹಪಿಯೂ ನನಗಿಲ್ಲವಲ್ಲಾ. ನನ್ನೊಳಗೂ ಹುಗಿದುಹೋದ ಒಂದಷ್ಟು ಸತ್ಯಗಳು ಇವೆಯಲ್ಲವೇ?

ಆದರೆ ಒಂದಂತೂ ನಿಜ, ಇಷ್ಟೆಲ್ಲಾ ವರುಷಗಳ ನಂತರವೂ ನನ್ನೊಡನೆ ಅವಳಿದ್ದಳು, ನನ್ನ ಮದುವೆಯ ನಂತರವೂ. ಸುಜಿ ನನ್ನ ಜೀವನ ಪ್ರವೇಶಿಸಿ ಬದುಕೆಂದರೆ ಮೂರು ನಿಮಿಷದ ಧಾವಂತ ಎಂಬ ಸತ್ಯದ ಅರಿವಿನ ನಂತರವೂ. ಮಲೆನಾಡಿನ ಮಳೆಗಾಲದ ತಂಪಿನಂತೆ ಅಥವಾ ಬೇಸಿಗೆಯ ಅಕಾಲ ಮಳೆ ಉದುರಿಸುವ ಹಲವು ನೆನಪುಗಳ ಕಂಪಿನಂತೆ. ಮೈಗೆ ಪೂಸಿಕೊಂಡ ಯಾವುದೋ ಸುಗಂಧದಂತೆ, ಬೇಸತ್ತ ಗಳಿಗೆಯಲ್ಲಿ ಹೃದಯದಾಳದಿಂದ ಉಕ್ಕಿ ಬರುವ ಯಾವುದೋ ಸುಮಧುರ ಯಾತನೆಯ ನೋವಿನಂತೆ ಅವಳು ನನ್ನೊಳಗಿದ್ದಳೆನ್ನುವುದು ಮಾತ್ರ ನಿಜ.

ಬೆಳಗ್ಗೆ ಬ್ರಷ್ ಹಿಡಿದು ಹಲ್ಲುಜ್ಜುವುದರಿಂದ ರಾತ್ರಿ ಮಲಗುವವರೆಗೂ, ಸಲೂನ್‌ನಲ್ಲಿ ಕೂದಲು ಕತ್ತರಿಸಿಕೊಳ್ಳುವಾಗ ಕನ್ನಡಿಯಲ್ಲಿ ಇಣುಕಿದ ಪ್ರತಿಬಿಂಬದಿಂದ ಶೂಗೆ ಪಾಲಿಷ್ ಹಾಕುವಾಗ ಮಿಂಚಿದ ಹೊಳಪಿನವರೆಗೂ ನಾ ಕಂಡಿದ್ದು ಒಂದೇ ಮುಖ! ಆದರೆ ಆ ಮುಖದ ಗುರುತೇ ಇಂದು ಹತ್ತಲಿಲ್ಲವೆಂದರೆ?

ಅವಳ ಬಗ್ಗೆ ನನಗಿದ್ದಿದ್ದು ಅನುಕಂಪವೇ, ಗೊತ್ತಿಲ್ಲ. ಸದ್ಯದ ನನ್ನ ಬದುಕನ್ನು ಸಹ್ಯವಾಗಿಸುವ ಒಂದು ಸುಂದರ ನೆನಪಾಗಿ ಕೇವಲ ನನ್ನ ಸ್ಮೃತಿಯ ಕಣವಾಗಿಯಷ್ಟೇ ಅವಳು ಉಳಿದಿದ್ದಳೇ ಗೊತ್ತಿಲ್ಲ. ಬಹುಶಃ ಹೃದಯದೊಳಗೆ ಹಿಡಿದಿಟ್ಟುಕೊಂಡಿದ್ದ ಎಂದಿನದೋ ಮಾರ್ದವ ಕ್ಷಣಗಳನ್ನಷ್ಟೇ ಮೆಲುಕು ಹಾಕುತ್ತಾ ವಾಸ್ತವದಲ್ಲಿ ಅವಳನ್ನು ನಾನು ಸಂಪೂರ್ಣ ಮರೆತೆಬಿಟ್ಟಿದ್ದೆನೋ, ಅದೂ ಗೊತ್ತಿಲ್ಲ.

'ಹದಿನೆಂಟು ವರ್ಷದ ಹುಡುಗೀನಾ ಮೂವತ್ತೈದು ವರ್ಷದೋನಿಗೆ ಕಟ್ಟೋದಂದ್ರೆ ಸಾಧಾರಣದ ಮಾತಾ, ನೀನೇ ಹೇಳ್? ಮೊದಮೊದಲು ಭಾಳಾ ಸಿಟ್ಟ್ ಬರ್ತಿತ್ತು! ಗಂಡನ ಮೇಲೆ, ಅಮ್ಮನ ಮೇಲೆ, ಅಂಬತ್ತೆ ಮೇಲೆ, ಊರವ್ರ ಮೇಲೆ, ಎಲ್ರ ಮೇಲೆ! ಜೊತ್ಗೆ ಸತ್ತೋದ ಅವ್ರ ಹೆಂಡ್ತಿಯ ಎರಡ್ ಚಿಕ್ಕ ಮಕ್ಳನ್ನು ಬೇರೆ ನೋಡ್ಕೋಬೇಕಿತ್ತು! ನಮ್ ದೇಶವೂ ಅಲ್ಲ, ಯಾವ್ದೋ ದೇಶ. ಓಡಿ ಬರೋಕೆ ಅಮ್ಮನ ಮನೆಯೂ ಹತ್ರವಿರ್ಲಿಲ್ಲ! ಎರ್ಡು ವರ್ಷ ತಲೆ ಸಂಪೂರ್ಣ ಕೆಟ್‌ಹೋಗಿತ್ತು ಮಾರಾಯ.